ಸಮಗ್ರ ಶಿಕ್ಷಣ-ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01.

ಕಡತ ಸಂಖ್ಯೆ: ಎಸ್.ಎಸ್.ಕೆ/ಕ್ಯೂ.ಎ/ನಲಿಕಲಿ/ಸುತ್ತೋಲೆ/2022-23

ದಿನಾಂಕ: 04-05-2022

# ಅನುಷ್ಠಾನದ ಮಾರ್ಗಸೂಚಿಗಳು (Implementation Guidelines)

**ವಿಷಯ: 2022-23ನೇ ಶೈಕ್ಷಣಿಕ ಸಾಲಿಗೆ ಕರ್ನಾಟಕ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 01 ರಿಂದ 03ನೇ ತರಗತಿಯವರೆಗೆ 'ವಿದ್ಯಾ ಪ್ರವೇಶ' ಹಾಗೂ 'ಕಲಿಕಾ ಚೇತರಿಕೆ' ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಿಸಿ, ಅನುಪಾಲನೆಗೊಳಿಸಲು ಹೊರಡಿಸಲಾದ ಮಾರ್ಗಸೂಚಿ ಅಂಶಗಳು.**

******

ಕರ್ನಾಟಕ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳ ಕನ್ನಡ ಮಾಧ್ಯಮದ 01 ರಿಂದ 03ನೇ ತರಗತಿವರೆಗೂ ಮತ್ತು ಉರ್ದು ಮಾಧ್ಯಮದ 01 ರಿಂದ 02ನೇ ತರಗತಿವರೆಗೂ ನಲಿಕಲಿ ಬೋಧನಾ ಕಲಿಕಾ ಪದ್ಧತಿಯನ್ನು ಅನುಷ್ಠಾನಕ್ಕೆ ತರಲಾಗಿರುತ್ತದೆ. ಪ್ರಸ್ತುತ ಆಂಗ್ಲ ಮಾಧ್ಯಮದ 01 ರಿಂದ 04ನೇ ತರಗತಿವರೆಗೂ ದ್ವಿಭಾಷಾ ಕಲಿಕಾ ಪದ್ಧತಿಯನ್ನು ಅನುಷ್ಠಾನಕ್ಕೆ ತರಲಾಗಿರುತ್ತದೆ. 2022-23ನೇ ಸಾಲಿನ ಶೈಕ್ಷಣಿಕ ಅವಧಿಗೆ ಸಂಬಂಧಿಸಿದಂತೆ ಎನ್.ಇ.ಪಿ-2020ರ ಆಶಯಕ್ಕೆ ಪೂರಕವಾಗಿ ಈ ಎಲ್ಲಾ ತರಗತಿಗಳಲ್ಲಿ 'ವಿದ್ಯಾ ಪ್ರವೇಶ' ಎಂಬ ವಿನೂತನ ಶಾಲಾ ಸಿದ್ಧತಾ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ಒಳಪಡಿಸುವುದು ಅತ್ಯಗತ್ಯವಾಗಿದೆ.

ಕೋವಿಡ್ ಸಾಂಕ್ರಾಮಿಕ ಸನ್ನಿವೇಶದಿಂದಾಗಿ ಶಾಲಾ ಮಕ್ಕಳ ಕಲಿಕೆಯಲ್ಲಿ ಉಂಟಾಗಿರುವ ಕಲಿಕಾ ಕೊರತೆಯನ್ನು ಸರಿದೂಗಿಸಲು ಘನ ಕರ್ನಾಟಕ ಸರ್ಕಾರವು 'ಕಲಿಕಾ ಚೇತರಿಕೆ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುತ್ತಿದ್ದು, ಈ ಎರಡೂ ಕಾರ್ಯಕ್ರಮಗಳ ಮೇಲುಸ್ತುವಾರಿ ಹಾಗೂ ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಆಡಳಿತ ಮತ್ತು ಉಪನಿರ್ದೇಶಕರು, ಅಭಿವೃದ್ಧಿ ಇವರು ಅಗತ್ಯ ಕಾರ್ಯತಂತ್ರಗಳನ್ನು ರೂಪಿಸುವಂತೆ ಈ ಮೂಲಕ ತಿಳಿಸಲಾಗಿದೆ.

**ವಿದ್ಯಾ ಪ್ರವೇಶ ಕಾರ್ಯಕ್ರಮದ ಅನುಷ್ಠಾನಾತ್ಮಕ ಅಂಶಗಳು:**

**(ಜೂನ್-2022 – ಆಗಸ್ಟ್-2022 ಅಂತ್ಯದವರೆಗೆ)**

- ಎನ್.ಇ.ಪಿ -2020 ರ ಆಶಯದಂತೆ ಕರ್ನಾಟಕ ರಾಜ್ಯದ ಎಲ್ಲಾ ಮಾಧ್ಯಮಗಳ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ 'ವಿದ್ಯಾ ಪ್ರವೇಶ' ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ಸದರಿ ಕಾರ್ಯಕ್ರಮವು 03 ತಿಂಗಳು/12 ವಾರಗಳ ಚಟುವಟಿಕೆಯ ವಿನ್ಯಾಸವನ್ನು ಒಳಗೊಂಡಿದೆ.
- ಈ ಕಾರ್ಯಕ್ರಮವು ಎನ್.ಇ.ಪಿ. ನಿರ್ದೇಶನದಂತೆ 01ನೇ ತರಗತಿಗೆ ಮಾತ್ರ ಸೀಮಿತವಾಗಿದ್ದು, ಹೊಸದಾಗಿ 01ನೇ ತರಗತಿಗೆ ದಾಖಲಾಗುವ ವಿದ್ಯಾರ್ಥಿಗಳಿಗೆ ಇದೊಂದು ಶಾಲಾ ಸಿದ್ಧತಾ ಕಾರ್ಯಕ್ರಮವಾಗಿರುತ್ತದೆ.
- ಪ್ರಸ್ತುತ ಕೋವಿಡ್ ಸಾಂಕ್ರಾಮಿಕ ಸನ್ನಿವೇಶದಿಂದ ಉಂಟಾದ ಕಲಿಕಾ ಕೊರತೆಯನ್ನು ಪರಿಗಣಿಸುತ್ತಾ, 2022-23ನೇ ಶೈಕ್ಷಣಿಕ ಸಾಲಿನಲ್ಲಿ ಸದರಿ ಕಾರ್ಯಕ್ರಮವನ್ನು 01 ರಿಂದ 03ನೇ ತರಗತಿವರೆಗೂ ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಕ್ಕೆ ತರಲಾಗುತ್ತಿದೆ.

- ಶಾಲೆಗಳಲ್ಲಿ ಕಾರ್ಯಕ್ರಮದ ಅನುಷ್ಠಾನಕ್ಕೆ ನೆರವಾಗುವಂತೆ ಪ್ರತೀ ಶಿಕ್ಷಕರಿಗೂ 02 ದಿನಗಳ ಬ್ಲಾಕ್ ಹಂತದ ತರಬೇತಿಯನ್ನು ಆಯೋಜಿಸಲಾಗಿದ್ದು, ವಿದ್ಯಾಪ್ರವೇಶ ಶಿಕ್ಷಕರ ಕೈಪಿಡಿಯನ್ನು ಎಲ್ಲಾ ಶಿಕ್ಷಕರಿಗೂ ಒದಗಿಸಲು ಇಲಾಖೆಯ ವತಿಯಿಂದ ಕ್ರಮವಹಿಸಿದೆ.
- ಶಿಕ್ಷಕರ ಕೈಪಿಡಿಯಲ್ಲಿ ದಿನವಾರು–ವಾರವಾರು ಚಟುವಟಿಕೆಗಳನ್ನು 03ತಿಂಗಳು/12 ವಾರಗಳಿಗೆ ಪೂರಕವಾಗಿ ಸಿದ್ಧಪಡಿಸಿದ್ದು, ಬಳಕೆ ಕುರಿತಂತೆ ಅಗತ್ಯ ಮಾರ್ಗದರ್ಶನವನ್ನು ಸಾಹಿತ್ಯದಲ್ಲಿ ನೀಡಲಾಗಿದೆ.
- ವಿದ್ಯಾಪ್ರವೇಶ ಕಾರ್ಯಕ್ರಮದಲ್ಲಿ ಕೇಂದ್ರ ಮಾರ್ಗಸೂಚಿಯಂತೆ ಶಾಲಾ ಪೂರ್ವ ಸಿದ್ಧತೆಗೆ ಪೂರಕವಾಗಿ ತರಗತಿವಾರು 70 ಕಲಿಕಾ/ಚಟುವಟಿಕಾ ಹಾಳೆಗಳನ್ನು ಸಿದ್ಧಪಡಿಸಿದ್ದು, ಅಭ್ಯಾಸ ಪುಸ್ತಕಗಳ ರೂಪದಲ್ಲಿ ಮೂರೂ ತರಗತಿಗಳ ಮಕ್ಕಳಿಗೂ ಒದಗಿಸಲಾಗುವುದು.

**ಕಲಿಕಾ ಚೇತರಿಕೆ ಕಾರ್ಯಕ್ರಮದ ಅನುಷ್ಠಾನಾತ್ಮಕ ಅಂಶಗಳು:**

**(ಸೆಪ್ಟೆಂಬರ್–2022–ಏಪ್ರಿಲ್–2023 ಮೊದಲ ವಾರದವರೆಗೆ)**

- ನಿಪುಣ್ ಭಾರತ್ ಮಾರ್ಗಸೂಚಿಯಂತೆ ತರಗತಿವಾರು ಕಲಿಕೆಯ ಫಲಗಳನ್ನು ಆಧರಿಸಿ 01 ರಿಂದ 03ನೇ ತರಗತಿವರೆಗಿನ ಕನ್ನಡ ಹಾಗೂ ಗಣಿತ ವಿಷಯಗಳಿಗೆ **'ಕಲಿಕಾ ಚೇತರಿಕೆ'** ಕಾರ್ಯಕ್ರಮವನ್ನು ರೂಪಿಸಿದೆ.
- ಆರಂಭಿಕ 03 ತಿಂಗಳ ವಿದ್ಯಾ ಪ್ರವೇಶ ಕಾರ್ಯಕ್ರಮದ ಅನುಷ್ಠಾನದ ನಂತರ 01 ರಿಂದ 03ನೇ ತರಗತಿವರೆಗೆ **'ಕಲಿಕಾ ಚೇತರಿಕೆ'** ಕಾರ್ಯಕ್ರಮವು ಅನುಷ್ಠನಕ್ಕೆ ಒಳಪಡುತ್ತದೆ. ಅಂದರೆ, ಸದರಿ ಕಾರ್ಯಕ್ರಮವು ಸೆಪ್ಟಂಬರ್–2022ರ ಮಾಹೆಯಿಂದ ಆರಂಭವಾಗಿ ಮಾರ್ಚ್ 2023ರ ಅಂತ್ಯಕ್ಕೆ ಕೊನೆಗೊಳ್ಳುತ್ತದೆ.
- ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು ನಲಿಕಲಿ ತರಗತಿಗಳ ಬಹು ಹಂತದ ಕಲಿಕೆಯ ಸನ್ನಿವೇಶಕ್ಕೆ ಹೊಂದಿಸಲಾಗಿದ್ದು, ಹಿಂದಿನ ತರಗತಿಗಳ **'ಬುನಾದಿ ಅಕ್ಷರ ಹಾಗೂ ಸಂಖ್ಯಾ ಜ್ಞಾನದ'** ಪರಿಕಲ್ಪನೆಗಳ ಜೊತೆಗೆ ಪ್ರಸಕ್ತ ಸಾಲಿನ ಬುನಾದಿ ಹಂತದ ಪರಿಕಲ್ಪನೆಗಳನ್ನು ಕಲಿಯುವಂತೆ ಅವಕಾಶ ಕಲ್ಪಿಸಿದೆ.
- ಕಲಿಕಾ ಚೇತರಿಕೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಶಿಕ್ಷಕರಿಗೆ ಕೈಪಿಡಿಯನ್ನು ನೀಡಲಾಗುತ್ತಿದ್ದು, ಅನುಷ್ಠಾನದ ಕ್ರಮಗಳನ್ನು ಅರ್ಥೈಸಲು ಬ್ಲಾಕ್ ಹಂತದಲ್ಲಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ.
- ಕಲಿಕಾ ಚೇತರಿಕೆಯ ಭಾಗವಾಗಿ 01 ರಿಂದ 03ನೇ ತರಗತಿ ವಿದ್ಯಾರ್ಥಿಗಳಿಗೆ ತರಗತಿವಾರು ವಿಷಯವಾರು ಚಟುವಟಿಕೆ ಪುಸ್ತಕ/ಕಲಿಕೆಯ ಹಾಳೆಗಳನ್ನು ಒದಗಿಸಲು ಇಲಾಖೆಯ ವತಿಯಿಂದ ಕ್ರಮವಹಿಸಲಾಗಿದೆ.
- ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕಾರ್ಯಕ್ರಮದ ಸ್ವರೂಪವನ್ನು ಅರ್ಥೈಸಲು 03 ದಿನಗಳ ರಾಜ್ಯ ಮಟ್ಟದ ಎಂ.ಆರ್.ಪಿ. ತರಬೇತಿಯನ್ನು ಈಗಾಗಲೇ ನೀಡಲಾಗಿರುತ್ತದೆ. ತರಬೇತಿ ಹೊಂದಿದ ಎಂ.ಆರ್.ಪಿ.ಗಳು ಜಿಲ್ಲಾ ಹಂತದಲ್ಲಿ ಬ್ಲಾಕ್‌ನಿಂದ ಆಯ್ಕೆಗೊಂಡ ಸಂಪನ್ಮೂಲ ಶಿಕ್ಷಕರಿಗೆ 02 ದಿನಗಳ ತರಬೇತಿಯನ್ನು ನೀಡುವರು. ಜಿಲ್ಲಾ ಹಂತದಲ್ಲಿ ತರಬೇತಿ ಹೊಂದಿದವರು ಬ್ಲಾಕ್ ಹಂತದಲ್ಲಿ 02 ದಿನಗಳ ತರಬೇತಿಯನ್ನು ಶಿಕ್ಷಕರಿಗೆ ನೀಡುವರು. (ತರಬೇತಿಗಳ ಆಯೋಜನೆ ಬಗ್ಗೆ ಡಿ.ಎಸ್.ಇ.ಆರ್.ಟಿ ಹೊರಡಿಸಿದ ಸುತ್ತೋಲೆಯಂತೆ ಅಗತ್ಯ ಕ್ರಮವಹಿಸಲು ಮತ್ತು ಹೆಚ್ಚಿನ ಮಾಹಿತಿಗಾಗಿ ಡಿ.ಎಸ್.ಇ.ಆರ್.ಟಿ. ಸಂಸ್ಥೆಯನ್ನು ಸಂಪರ್ಕಿಸಲು ಸೂಚಿಸಿದೆ.)

# ಮೌಲ್ಯಮಾಪನ ಅನುಷ್ಠಾನದ ಕ್ರಮಗಳು (01 ರಿಂದ 03ನೇ ತರಗತಿ)

## 1. ವಿದ್ಯಾ ಪ್ರವೇಶ ಕಾರ್ಯಕ್ರಮದಲ್ಲಿನ ಮೌಲ್ಯಮಾಪನ ವಿಧಾನಗಳು:

ವಿದ್ಯಾಪ್ರವೇಶ ಕಾರ್ಯಕ್ರಮದಲ್ಲಿ ಎರಡು ವಿಧವಾದ ಮೌಲ್ಯಮಾಪನ ಪ್ರಕ್ರಿಯೆಯನ್ನು ನಡೆಸಲಾಗುವುದು. ಒಂದನೆಯದು ಪ್ರತಿ ಹದಿನೈದು ದಿನಗಳಿಗೊಮ್ಮೆ ನಡೆಸುವ 'ನನ್ನಸಾಧನೆ' ಎಂಬ ಪ್ರಕ್ರಿಯೆ. ಹದಿನೈದು ದಿನಗಳ ಕಾಲ ಮಕ್ಕಳು ಮಾಡಿದ ಚಟುವಟಿಕೆಯನ್ನು ಆಧರಿಸಿ ಇದನ್ನು ಮಾಡಲಾಗುವುದು. ಪ್ರತೀ ಮಗುವಿಗೂ ವೈಯಕ್ತಿಕವಾಗಿ ಪ್ರತ್ಯೇಕ ಹಾಳೆಯ ಮೂಲಕ ದಾಖಲೆಯನ್ನು ನಿರ್ವಹಿಸಬೇಕು ಮತ್ತು ಮಗುವಿನ ಪೋರ್ಟ್ ಪೋಲಿಯೋದಲ್ಲಿ ಸಂಗ್ರಹಿಸಿಡಬೇಕು.

ಇನ್ನೊಂದು ವಿಧವಾದ ಮೌಲ್ಯಮಾಪನ ಎಂದರೆ, ಪ್ರತೀ ತಿಂಗಳಿಗೊಮ್ಮೆ 03 ತಿಂಗಳು ಕಾಲ ನಡೆಸುವ 'ಸಮಗ್ರ' ಮೌಲ್ಯಮಾಪನವಾಗಿರುತ್ತದೆ. ಇದನ್ನು ಸಹ ಪ್ರತೀ ಮಗುವಿಗೆ ಪ್ರತ್ಯೇಕವಾದ ಹಾಳೆಯ ಮೂಲಕ ದಾಖಲಿಸಿ, ಪೋಷಕರಿಂದಲೂ ಸಹಿ ಪಡೆಯಬೇಕು ನಂತರ ಈ ಹಾಳೆಗಳನ್ನು ಪೋರ್ಟ್ ಪೋಲಿಯೋದಲ್ಲಿ ಸಂಗ್ರಹಿಸಿಡಬೇಕು ಮತ್ತು ಕ್ರೂಡೀಕರಣ ವಹಿಯಲ್ಲಿಯೂ ದಾಖಲಿಸಿಟ್ಟುಕೊಳ್ಳಬೇಕು.

## 2. ಕಲಿಕಾ ಚೇತರಿಕೆ ಕಾರ್ಯಕ್ರಮದಲ್ಲಿನ ಮೌಲ್ಯಮಾಪನ ವಿಧಾನಗಳು:

ಕಲಿಕಾ ಚೇತರಿಕೆ ಕಾರ್ಯಕ್ರಮ ಅನುಷ್ಠಾನ ಸಂದರ್ಭದಲ್ಲಿ ನಡೆಸುವ ಮೌಲ್ಯಮಾಪನವನ್ನು ಈ ಹಿಂದಿನ ವರ್ಷಗಳಲ್ಲಿ ನಡೆಸುತ್ತಿದ್ದಂತೆ ನಿಗದಿಪಡಿಸಿದ ತಿಂಗಳ ಅಂತ್ಯಕ್ಕೆ ಗುರಿ ಮತ್ತು ಮಕ್ಕಳ ಸಾಧನೆಯನ್ನು ಆಧರಿಸಿ ಶೇಕಡಾವನ್ನು ಕಂಡುಹಿಡಿದು ನಂತರ ಶ್ರೇಣಿಗೆ ಪರಿವರ್ತಿಸಿ ದಾಖಲೆಗಳಲ್ಲಿ ನಮೂದಿಸುವುದು.

## 3. ನಲಿಕಲಿ ತರಗತಿಗಳಲ್ಲಿ ಅನುಷ್ಠಾನಗೊಳಿಸಬೇಕಾದ ಮೌಲ್ಯಮಾಪನದ ವೇಳಾಪಟ್ಟಿ

| ಮೌಲ್ಯಮಾಪನ ವಿಧಗಳು | ಅನುಷ್ಠಾನದ ತಿಂಗಳುಗಳು |
|---|---|
| ರೂಪಣಾತ್ಮಕ ಮೌಲ್ಯಮಾಪನ – FA - 01 | ಅಕ್ಟೋಬರ್–22 |
| ರೂಪಣಾತ್ಮಕ ಮೌಲ್ಯಮಾಪನ – FA – 02 | ನವೆಂಬರ್–22 |
| ರೂಪಣಾತ್ಮಕ ಮೌಲ್ಯಮಾಪನ – SA – 01 | ಡಿಸೆಂಬರ್–22 |
| ರೂಪಣಾತ್ಮಕ ಮೌಲ್ಯಮಾಪನ – FA – 03 | ಜನವರಿ–23 |
| ರೂಪಣಾತ್ಮಕ ಮೌಲ್ಯಮಾಪನ – FA – 04 | ಫೆಬ್ರವರಿ–23 |
| ರೂಪಣಾತ್ಮಕ ಮೌಲ್ಯಮಾಪನ – SA - 02 | ಮಾರ್ಚ್–23 |

**ಸೂಚನೆ:** 2022–23ನೇ ಸಾಲಿನ ಕಲಿಕಾ ಚೇತರಿಕೆ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಮಾರ್ಪಡಿಸಿದ ಕಲಿಕಾ ಏಣಿಯನ್ನು ನೀಡಲಾಗಿದೆ. ಅದರಂತೆಯೇ, ಮಕ್ಕಳ ಪ್ರಗತಿ ನೋಟವನ್ನು ಸಹ ಶಿಕ್ಷಕರು ಮಾರ್ಪಡಿಸಿಕೊಳ್ಳಬೇಕು. ಮಕ್ಕಳ ಪ್ರಗತಿ ನೋಟದಲ್ಲಿ ಈ ಹಿಂದಿನಂತೆ ಪ್ರಗತಿಯನ್ನು ದಾಖಲಿಸುವುದು ಕಡ್ಡಾಯ. ಶಿಕ್ಷಕರು ಪ್ರತೀ ದಿನ ನಿರ್ವಹಿಸುವ ಚಟುವಟಿಕೆಗಳ ದಾಖಲೆಗಾಗಿ ದಿನಚರಿ ಪ್ರಕ್ರಿಯೆಯನ್ನು ಯಥಾವತ್ತು ಮುಂದುವರೆಸುವುದು.

# *Assessment Guidelines for Bilingual sections (Class I to IV)*

## *A. General Principles:*

*i.* *The purpose of assessment in class I to IV should be to support learning; it should help the teacher in understanding students' learning*

*and guide the teacher in modifying her lesson plan accordingly*

ii. *It should be primarily done in an informal way using observations, activities, and other play way methods during the process of teaching*

iii. *The assessment should strictly avoid ranking or evaluating the child as a fast learner, slow learner etc. or create any stress and fear of learning*

**B. What to assess?**

i. *Learning Outcomes should be the basis of the assessment*

ii. *The teacher should report the child's progress on each of the learning outcomes criteria as per the schedule (The schedule will be uploaded in the website)*

**C. How to assess?**

i. *Assessments should be integrated with regular teaching as per the lesson plans and the subject taught in the time table*

ii. *Assessments should be primarily oral, activity based, worksheets based*

iii. *Assessments can happen in groups or individually*

**D. How to report and document?**

i. *A portfolio for each child should be maintained to systematically document evidences of student's learning*

ii. *This portfolio could have the following- at least 3-4 anecdotal records written by the teacher about the child, at least 8-10 worksheets done by the child, checklists of the child's performance in an oral activity/group activity, progress sheet about each child's progress on each of the learning outcomes, one page by the teacher about what the child likes to do and what she/he finds difficult to do*

iii. *The reporting should be done as per the SATS format for each child. Weightages as per the existing SATS format.*

**E. Learning Outcomes to be tracked through Formative Assessments 1, 2, 3, 4 and Summative Assessment 1 and 2.**

i. *The learning outcomes are split in 4 parts– simpler outcomes will be tracked in the beginning months and more complex ones towards the latter half of the year*

ii. *The suggested sequence of LO's; the teacher can re-sequence them based on the learning levels of her students*

iii. *There should be alignment between the outcomes, pedagogical processes and assessment of children. Children cannot be assessed in areas that have not been taught in the class*

iv. *Prescribed Kalika – Chetarike materials and other TLM's will be used to teach; however, the assessment should not be limited to rote learning the content of the books. It must focus on developing and assessing the desired skills and capabilities stated in the outcomes.*

## 2022–23ನೇ ಶೈಕ್ಷಣಿಕ ಸಾಲಿಗೆ ಪೂರಕವಾಗಿ 01 ರಿಂದ 03ನೇ ತರಗತಿವರೆಗೂ ಸರಬರಾಜುಗೊಳ್ಳುತ್ತಿರುವ ಕಲಿಕಾ ಸಾಮಗ್ರಿಗಳ ವಿವರಗಳು

1. **ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ ಸರಬರಾಜುಗೊಳ್ಳುವ ಸಾಮಗ್ರಿಗಳು:**

✓ ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ ವಿದ್ಯಾ ಪ್ರವೇಶ ಶಿಕ್ಷಕರ ಕೈಪಿಡಿಯನ್ನು ಕನ್ನಡ, ಉರ್ದು ಮಾಧ್ಯಮದ ನಲಿಕಲಿ ಘಟಕಗಳಿಗೆ ಮತ್ತು ಆಂಗ್ಲ ವಿಭಾಗ ತೆರೆದಿರುವ EMTIP ಗಳಲ್ಲಿ ತರಗತಿಗೆ ಒಂದರಂತೆ ಹಾಗೂ ಇತರೆ ಮಾಧ್ಯಮದಲ್ಲಿ ಪ್ರತೀ ಶಾಲೆಗೆ ಒಂದರಂತೆ ವಿತರಿಸಲಾಗುವುದು. (ಅಂದಾಜು 290–300 ಪುಟಗಳು)

✓ ವಿದ್ಯಾ ಪ್ರವೇಶ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ 01, 02 ಮತ್ತು 03ನೇ ತರಗತಿಗೆ ದಾಖಲಾಗಿರುವ ಪ್ರತೀ ವಿದ್ಯಾರ್ಥಿಗೂ ತಲಾ ಒಂದರಂತೆ ಅಭ್ಯಾಸ/ಕಲಿಕೆಯ ಹಾಳೆಗಳಿರುವ ಪುಸ್ತಕಗಳನ್ನು ವಿತರಿಸಲಾಗುವುದು. (ಅಂದಾಜು 70–80 ಪುಟಗಳು– EMTIP ಮಕ್ಕಳಿಗೂ ಸೇರಿದಂತೆ)

✓ ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿಯನ್ನು ಕನ್ನಡ, ಉರ್ದು ಮಾಧ್ಯಮದ ನಲಿಕಲಿ ಘಟಕಗಳಿಗೆ ಮತ್ತು ಆಂಗ್ಲ ಮಾಧ್ಯಮದ EMTIP ಗಳಲ್ಲಿ ಪ್ರತೀ ತರಗತಿಗೆ ಒಂದರಂತೆ ಹಾಗೂ ಇತರೆ ಮಾಧ್ಯಮದಲ್ಲಿ ಪ್ರತೀ ಶಾಲೆಗೆ ಒಂದರಂತೆ ವಿತರಿಸಲಾಗುವುದು. (ಅಂದಾಜು 100–110 ಪುಟಗಳು– EMTIP ಮಕ್ಕಳಿಗೂ ಸೇರಿದಂತೆ )

✓ ಕಲಿಕಾ ಚೇತರಿಕೆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ 01, 02 ಮತ್ತು 03ನೇ ತರಗತಿಗೆ ದಾಖಲಾಗಿರುವ ಪ್ರತೀ ವಿದ್ಯಾರ್ಥಿಗೂ ಕನ್ನಡ ಮತ್ತು ಗಣಿತ ವಿಷಯ ಸೇರಿಸಿ, ತಲಾ ಎರಡರಂತೆ ಅಭ್ಯಾಸ/ಕಲಿಕೆಯ ಹಾಳೆಗಳಿರುವ ಪುಸ್ತಕಗಳನ್ನು ವಿತರಿಸಲಾಗುವುದು. (ಅಂದಾಜು 90–100 ಪುಟಗಳು)

2. **ಕೆ.ಟಿ.ಬಿ.ಎಸ್ ವತಿಯಿಂದ ಸರಬರಾಜುಗೊಳ್ಳುವ ಸಾಮಗ್ರಿಗಳು:**

✓ ಸಮಗ್ರ ಶಿಕ್ಷಣ ಕರ್ನಾಟಕದ ಪಿ.ಎ.ಬಿ ಅನುದಾನದಲ್ಲಿ ಕೆ.ಟಿ.ಬಿ.ಎಸ್.ವತಿಯಿಂದ 2022–23ನೇ ಸಾಲಿಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ಕನ್ನಡ ಮತ್ತು ಉರ್ದು ಮಾಧ್ಯಮದ ನಲಿಕಲಿ ಘಟಕಗಳಿಗೆ ಪ್ರಗತಿ ನೋಟ, ಹವಾಮಾನ ನಕ್ಷೆಯನ್ನು ವಿತರಿಸಲಾಗುವುದು.

✓ English Nali Kali ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಮುಂದುವರೆದ ಭಾಗವಾಗಿ ENK Level-03ರ ಶಿಕ್ಷಕರ ಕಾರ್ಡ್‌ಗಳು, ಮತ್ತು ಅಭ್ಯಾಸ ಪುಸ್ತಕಗಳು ಸರಬರಾಜುಗೊಳ್ಳುತ್ತಿದ್ದು, ಸದರಿ ಸಾಮಗ್ರಿಗಳನ್ನು ಪ್ರಸಕ್ತ ಸಾಲಿನಲ್ಲಿ ಕನ್ನಡ ಮತ್ತು ಉರ್ದು ಮಾಧ್ಯಮದ ನಲಿಕಲಿ ಘಟಕಗಳಿಗೂ ಕೂಡಾ ವಿತರಿಸಲಾಗುವುದು.

✓ ರಾಜ್ಯದ ಎಲ್ಲಾ ಕನ್ನಡ ಮತ್ತು ಉರ್ದು ಮಾಧ್ಯಮದ ನಲಿಕಲಿ ಘಟಕಗಳಿಗೆ ಹಾಗೂ EMTIP ತರಗತಿಗಳಿಗೂ ಸೇರಿದಂತೆ 40 ಇಂಗ್ಲಿಷ್ ಕಥಾ ಪುಸ್ತಕಗಳು ಸರಬರಾಜುಗೊಳ್ಳುತ್ತಿದ್ದು, ಸದರಿ ಸಾಮಗ್ರಿಗಳು ಪ್ರಸಕ್ತ ಸಾಲಿಗೆ Foundation Literature & Numeracy ಅಡಿಯಲ್ಲಿ ಇಂಗ್ಲಿಷ್ ಭಾಷಾ ವಿಷಯದ ಕಲಿಕೆಗೆ ಸೇರ್ಪಡೆಗೊಳ್ಳುವ ನೂತನ ಸಾಮಗ್ರಿಗಳಾಗಿವೆ. ಈ ಸಾಮಗ್ರಿಗಳನ್ನು 01 ಮತ್ತು 02ನೇ ತರಗತಿ ಮಕ್ಕಳ ಭಾಷಾ ಕಲಿಕೆಗೂ ಬಳಸಿಕೊಳ್ಳುವುದು.

✓ 'ವಿದ್ಯಾ ವಿಕಾಸ' ಯೋಜನೆಯಡಿಯಲ್ಲಿ ಕೆ.ಟಿ.ಬಿ.ಎಸ್ ವತಿಯಿಂದ 01, 02 ಮತ್ತು 03ನೇ ತರಗತಿಗಳಿಗೆ ಉಚಿತ ವಿತರಣೆಯಾಗಿ ಸರಬರಾಜಗೊಳ್ಳುತ್ತಿದ್ದ ಕನ್ನಡ, ಗಣಿತ, ಪರಿಸರ ಅಧ್ಯಯನದ ನಲಿಕಲಿ ಅಭ್ಯಾಸ ಪುಸ್ತಕಗಳು ಹಾಗೂ ENK Level-01 & 02 ರ ಅಭ್ಯಾಸ ಪುಸ್ತಕಗಳು ಸಹ ಎಂದಿನಂತೆ ಸರಬರಾಜುಗೊಳ್ಳುತ್ತವೆ.

- ✓ ಕೆ.ಟಿ.ಬಿ.ಎಸ್ ವತಿಯಿಂದ ವಿತರಿಸಲಾಗುವ ENK Level-01, 02 &03 ರ ಅಭ್ಯಾಸದ ಪುಸ್ತಕಗಳನ್ನು ಕಲಿಕಾ ಚೇತರಿಕೆ ಭಾಗವಾಗಿಯೇ ಇಂಗ್ಲಿಷ್ ವಿಷಯದ ಅವಧಿಯಲ್ಲಿ ಶಿಕ್ಷಕರು ಉಪಯೋಗಿಸತಕ್ಕದ್ದು. ಇದಕ್ಕಾಗಿ ಪ್ರತ್ಯೇಕ ಪುಸ್ತಕಗಳನ್ನು ವಿತರಿಸುವುದಿಲ್ಲ.
- ✓ 2022–23ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ 'ಕಲಿಕಾ ಚೇತರಿಕೆ' ಅಡಿಯಲ್ಲಿ ನಲಿಕಲಿ ತರಗತಿಗಳಿಗೆ (01 ರಿಂದ 03) ಮಾರ್ಪಡಿಸಿದ ಕಲಿಕಾ ಏಣಿಯನ್ನು ನೀಡಲಾಗಿದ್ದು, ಈ ಎಲ್ಲಾ ಸಾಮಗ್ರಿಗಳ ಬಳಕೆಗೆ ಈ ಮಾರ್ಪಡಿಸಿದ ಏಣಿಯಲ್ಲಿ ಅವಕಾಶವನ್ನು ಕಲ್ಪಿಸಿದೆ.
- ✓ ಎಸ್.ಎಸ್.ಕೆ ಹಾಗೂ ಕೆ.ಟಿ.ಬಿ.ಎಸ್ ಸಂಸ್ಥೆಗಳಿಂದ ಸರಬರಾಜು ಮಾಡಲಾಗುತ್ತಿರುವ ಎಲ್ಲಾ ರೀತಿಯ ಕಲಿಕಾ ಸಾಮಗ್ರಿಗಳನ್ನು ಅವಧಿವಾರು ಬಳಸಿಕೊಳ್ಳುವ ಬಗ್ಗೆ ಶಿಕ್ಷಕರ ಕೈಪಿಡಿಯಲ್ಲಿ ಅಗತ್ಯ ಮಾರ್ಗದರ್ಶನವನ್ನು ನೀಡಲಾಗಿದ್ದು, ಈ ಬಗ್ಗೆ ಶಿಕ್ಷಕರಲ್ಲಿ ಜಾಗೃತಿ ಮೂಡಿಸುವುದು.

**ವಿಶೇಷ ಗಮನಕ್ಕೆ:**

**2022–23ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ 01 ರಿಂದ 03ನೇ ತರಗತಿಯ ನಲಿಕಲಿ ಘಟಕಗಳಲ್ಲಿ ಶಾಲೆ ಆರಂಭದ 03 ತಿಂಗಳು/12ವಾರ ವಿದ್ಯಾ ಪ್ರವೇಶ ಕಾರ್ಯಕ್ರಮವನ್ನು ಕಡ್ಡಾಯವಾಗಿ ಅನುಷ್ಠಾನಕ್ಕೆ ಒಳಪಡಿಸಬೇಕಿರುವುದರಿಂದ ಈ ಅವಧಿಯಲ್ಲಿ ನಲಿಕಲಿ ಪದ್ಧತಿಯ ಯಾವುದೇ ಸಾಮಗ್ರಿಗಳು ಬಳಕೆಯಾಗುವುದಿಲ್ಲ. ಕೇವಲ ವಿದ್ಯಾ ಪ್ರವೇಶ ಶಿಕ್ಷಕರ ಕೈಪಿಡಿ ಮತ್ತು ಅಂದಾಜು 70 ರಿಂದ 80 ಪುಟಗಳಿರುವ ವಿದ್ಯಾರ್ಥಿಗಳ ಅಭ್ಯಾಸದ ಪುಸ್ತಕವನ್ನು ಮಾತ್ರ ಶಿಕ್ಷಕರು ಬಳಕೆಮಾಡತಕ್ಕದ್ದು.**

**'ವಿದ್ಯಾ ಪ್ರವೇಶ' ಕಾರ್ಯಕ್ರಮ ಮುಕ್ತಾಯದ ನಂತರ ಅಂದರೆ, 03 ತಿಂಗಳು/12ವಾರಗಳ ಅಂತ್ಯದಲ್ಲಿ ಈ ಕುರಿತ ಮೌಲ್ಯಮಾಪನ ಪ್ರಕ್ರಿಯೆ ಮುಕ್ತಾಯಗೊಂಡ ನಂತರ 01 ರಿಂದ 03ನೇ ತರಗತಿಗೆ 'ಕಲಿಕಾ ಚೇತರಿಕೆ' ಆರಂಭವಾಗುತ್ತದೆ. ಕಲಿಕಾ ಚೇತರಿಕೆ ಆರಂಭವಾದ ನಂತರ ಮಾತ್ರ ನಲಿಕಲಿ ಪದ್ಧತಿಯ ಎಲ್ಲಾ ಕಲಿಕಾ ಸಾಮಗ್ರಿಗಳನ್ನು ನಿಯಮಾನುಸಾರ ಕಲಿಕಾ ಏಣಿಯಂತೆಯೇ ಶಿಕ್ಷಕರು ಬಳಕೆಮಾಡತಕ್ಕದ್ದು.**

**ಜಿಲ್ಲಾ ಹಂತದ ಅಧಿಕಾರಿಗಳ ಕರ್ತವ್ಯಗಳು:**

- ರಾಜ್ಯ ಮಟ್ಟದಲ್ಲಿ 03 ದಿನಗಳ ತರಬೇತಿ ಹೊಂದಿದ ನಲಿಕಲಿ–EMTIP ಎಂ.ಆರ್.ಪಿ.ಗಳನ್ನು ಜಿಲ್ಲಾ ಹಂತದಲ್ಲಿ ಕಡ್ಡಾಯವಾಗಿ ಬಳಕೆ ಮಾಡಿಕೊಳ್ಳುವುದು.
- ರಾಜ್ಯ ಮಟ್ಟಕ್ಕೆ ಇಂಗ್ಲಿಷ್ ವಿಷಯಕ್ಕೆ ಆಗಮಿಸಿದ್ದ ಇಬ್ಬರು ಎಂ.ಆರ್.ಪಿ.ಗಳಲ್ಲಿ EMTIP ವಿಷಯದ ಶಿಕ್ಷಕರು ಭಾಗವಹಿಸದೇ, ENK ಶಿಕ್ಷಕರು ಭಾಗವಹಿಸಿರುವುದು ಕಂಡುಬಂದಿದೆ. ಆದ ಕಾರಣ, ಈ ಇಬ್ಬರಲ್ಲಿ ಒಬ್ಬರನ್ನು ಕೈಬಿಟ್ಟು, EMTIP /ದ್ವಿಭಾಷಾ ಕಲಿಕಾ ಪದ್ಧತಿಯಲ್ಲಿ ಪರಿಣಿತರಾದ ಒಬ್ಬರನ್ನು ಜಿಲ್ಲಾ ಹಂತದ ತರಬೇತಿಯಲ್ಲಿ ಕಡ್ಡಾಯವಾಗಿ ನಿಯೋಜಿಸಿಕೊಳ್ಳುವುದು. (ದ್ವಿ ಭಾಷಾ ಶಾಲೆಯ ಇಂಗ್ಲಿಷ್ ವಿಷಯದ ಅವಧಿಗಳ ನಿರ್ವಹಣೆಗೆ ಹಾಗೂ ಆ ತರಗತಿಗಳ ಮೌಲ್ಯಮಾಪನ ಅನುಷ್ಠಾನದ ಕ್ರಮಗಳು EMTIP ಸಂಪನ್ಮೂಲ ವ್ಯಕ್ತಿಗಳಿಗೆ ಹೆಚ್ಚು ತಿಳಿದಿರುವುದರಿಂದ ಅವರ ಭಾಗವಹಿಸುವಿಕೆ ಕಡ್ಡಾಯವಾಗಿರುತ್ತದೆ)
- ಎಂ.ಆರ್.ಪಿ.ಗಳಿಗೆ ರಾಜ್ಯ ಹಂತದಲ್ಲಿ ತರಬೇತಿ ನೀಡುವಾಗ ಪ್ರತಿಯೊಬ್ಬ ಶಿಬಿರಾರ್ಥಿಗೂ ಅಗತ್ಯ ಸಾಮಗ್ರಿಗಳನ್ನು ಒದಗಿಸಲಾಗಿರುತ್ತದೆ. ಇದೇ ರೀತಿಯ ಸಾಮಗ್ರಿಗಳನ್ನು ಜಿಲ್ಲಾ ಹಂತದ ತರಬೇತಿಯ ಸಂದರ್ಭದಲ್ಲಿಯೂ ಒದಗಿಸುವುದು. (ಅನುದಾನ ಬಳಕೆ ಕುರಿತಂತೆ ಡಿ.ಎಸ್.ಇ.ಆರ್.ಟಿ. ಸಂಸ್ಥೆಯು ಹೊರಡಿಸಿರುವ ತರಬೇತಿ ಮಾರ್ಗಸೂಚಿಯನ್ನು ಅವಲೋಕಿಸಲು ಸೂಚಿಸಿದೆ)

- 01 ರಿಂದ 03ನೇ ತರಗತಿಗೆ ಸಂಬಂಧಿಸಿದಂತೆ, 2022-23ನೇ ಸಾಲಿನಲ್ಲಿ ಶಾಲೆ ಆರಂಭದ ದಿನದಿಂದ 03 ತಿಂಗಳ/12 ವಾರಗಳ ಅವಧಿಯವರೆಗೂ **'ವಿದ್ಯಾ ಪ್ರವೇಶ'** ಕಾರ್ಯಕ್ರಮವನ್ನು ಕಡ್ಡಾಯವಾಗಿ ಅನುಷ್ಠಾನಕ್ಕೆ ಒಳಪಡಿಸಬೇಕಿರುವುದರಿಂದ ಉಪನಿರ್ದೇಶಕರು, ಆಡಳಿತ ಹಾಗೂ ಉಪನಿರ್ದೇಶಕರು, ಅಭಿವೃದ್ಧಿ ಇವರು ಸದರಿ ಕಾರ್ಯಕ್ರಮದ ಮೇಲ್ವಿಚಾರಣೆಗಾಗಿ ಒಬ್ಬ ನೋಡಲ್ ಅಧಿಕಾರಿಯನ್ನು ನಿಯೋಜಿಸಿಕೊಳ್ಳುವುದು.
- **'ವಿದ್ಯಾ ಪ್ರವೇಶ'** ಕಾರ್ಯಕ್ರಮದ ನಂತರ ಇದೇ ತರಗತಿಗಳಿಗೆ **'ಕಲಿಕಾ ಚೇತರಿಕೆ'** ಕಾರ್ಯಕ್ರಮವು ಅನುಷ್ಠಾನಕ್ಕೆ ಒಳಪಡುವುದರಿಂದ ಜಿಲ್ಲಾ ಹಂತದಲ್ಲಿ ಸದರಿ ಕಾರ್ಯಕ್ರಮದ ಮೇಲ್ವಿಚಾರಣೆಗಾಗಿ ಈಗಾಗಲೇ ನಲಿಕಲಿ ಮತ್ತು ಎಫ್.ಎಲ್.ಎನ್ ಚಟುವಟಿಕೆಗಳ ನಿರ್ವಹಣೆಗಾಗಿ ಇದ್ದಂತಹ ನೋಡಲ್ ಅಧಿಕಾರಿಗಳು ಸದರಿ ಕಾರ್ಯಕ್ರಮಗಳ ಮೇಲ್ವಿಚಾರಣೆಗೂ ನಿಯೋಜನೆಗೊಳ್ಳುವಂತೆ ಕ್ರಮವಹಿಸುವುದು.
- ಉಪನಿರ್ದೇಶಕರು, (ಅಭಿವೃದ್ಧಿ) ಹಾಗೂ ಉಪನಿರ್ದೇಶಕರು, (ಆಡಳಿತ) ಮತ್ತು ಉಪಸಮನ್ವಯಾಧಿಕಾರಿಗಳು ಹಾಗೂ ಡಯಟ್‌ನ ನೋಡಲ್ ಅಧಿಕಾರಿಗಳ ಉಪಸ್ಥಿತಿಯಲ್ಲಿ ಎಲ್ಲಾ ಬ್ಲಾಕ್‌ಗಳ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿ ಇವರಿಗೆ ಸದರಿ ಕಾರ್ಯಕ್ರಮಗಳ ಅನುಷ್ಠಾನ ಕುರಿತಂತೆ ಅರ್ಧ ದಿನದ ಪರಿಚಯಾತ್ಮಕ ಮುಖಾಮುಖಿ ಸಭೆಯನ್ನು ಆಯೋಜಿಸುವುದು ಅಥವಾ ಈ ಕುರಿತು ಅವರೊಡನೆ ಚರ್ಚಿಸಿ ಸಮಾಲೋಚಿಸಲು ಝೂಮ್ ಮಾಧ್ಯಮದ ಮೂಲಕವು ಸಭೆಯನ್ನು ಏರ್ಪಡಿಸಬಹುದಾಗಿದೆ.
- ತಮ್ಮ ಜಿಲ್ಲಾ ವ್ಯಾಪ್ತಿಗೆ ಸಂಬಂಧಿಸಿದಂತೆ ಎಲ್ಲಾ ಬ್ಲಾಕ್‌ಗಳಲ್ಲಿ ಆಯೋಜನೆಗೊಳ್ಳುವ ಶಿಕ್ಷಕರ ತರಬೇತಿಗೆ ಒಬ್ಬೊಬ್ಬ ನೋಡಲ್ ಅಧಿಕಾರಿಯನ್ನು ನಿಯೋಜಿಸುವ ಮೂಲಕ ತರಬೇತಿಗಳ ಪರಿಣಾಮಕಾರಿ ಅನುಷ್ಠಾನ ಕುರಿತಂತೆ ಮೇಲುಸ್ತುವಾರಿ ಕೈಗೊಳ್ಳುವುದು. ತರಬೇತಿಯಲ್ಲಿನ ಭೌತಿಕ ಸಂಖ್ಯೆಗೆ/ಗುರಿಗೆ ಅನುಗುಣವಾಗಿ ಶಿಕ್ಷಕರ ಹಾಜರಾತಿಯನ್ನು ಅವಲೋಕಿಸಿ, ಅನುಪಾಲನೆಗೊಳಿಸುವುದು ಸದರಿಯವರ ಬಹುಮುಖ್ಯ ಜವಾಬ್ದಾರಿಯಾಗಿರುತ್ತದೆ.
- ತರಬೇತಿಗೆ ಸಂಬಂಧಿಸಿದ ಪ್ರಗತಿಯ ಅಂಶಗಳನ್ನು ಡಿ.ಎಸ್.ಇ.ಆರ್.ಟಿ ಹೊರಡಿಸುವ ಕಲಿಕಾ ಚೇತರಿಕೆ ಸುತ್ತೋಲೆಯಂತೆ ಅನುಪಾಲನೆಗೊಳಿಸುವುದು.

**ಬ್ಲಾಕ್ ಹಂತದ ಅಧಿಕಾರಿಗಳ ಕರ್ತವ್ಯಗಳು:**

- ಜಿಲ್ಲಾ ಹಂತದಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳನ್ನು ಬ್ಲಾಕ್ ಹಂತದ ತರಬೇತಿಯಲ್ಲಿ ಬಳಸಿಕೊಳ್ಳುವುದು.
- ಬಿ.ಇ.ಓ ಹಾಗೂ ಬಿ.ಆರ್.ಸಿ ನೇತೃತ್ವದಲ್ಲಿ ಎಲ್ಲಾ ಬಿ.ಆರ್.ಪಿ ಹಾಗೂ ಸಿ.ಆರ್.ಪಿ.ಗಳಿಗೆ ಅರ್ಧ ದಿನದ ಸಭೆ ಆಯೋಜಿಸುವ ಮೂಲಕ ವಿದ್ಯಾ ಪ್ರವೇಶ ಹಾಗೂ ಕಲಿಕಾ ಚೇತರಿಕೆ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕೆ ಕಾರ್ಯತಂತ್ರಗಳನ್ನು ರೂಪಿಸುವುದು.
- ಕಾರ್ಯಕ್ರಮಗಳು ಅನುಷ್ಠಾನಕ್ಕೆ ಒಳಪಟ್ಟ ದಿನದಿಂದಲೇ ಅವುಗಳ ಅನುಪಾಲನೆ ಕುರಿತಂತೆ ಬಿ.ಇ.ಓ ಮತ್ತು ಬಿ.ಆರ್.ಸಿ ಇವರು ಝೂಮ್ ಸಭೆಯ ಮೂಲಕ ಬಿ.ಆರ್.ಪಿ ಹಾಗೂ ಸಿ.ಆರ್.ಪಿ.ಗಳೊಂದಿಗೆ ಚರ್ಚಿಸಿ, ಪ್ರಗತಿ ವರದಿಯನ್ನು ಪಡೆಯುವುದು.
- ನಲಿಕಲಿಯ ಎಲ್ಲಾ ಘಟಕಗಳಿಗೂ ಹಾಗೂ ಆಂಗ್ಲ ವಿಭಾಗದ EMTIP ತರಗತಿಗಳಿಗೂ ಇಲಾಖೆ ಒದಗಿಸಿರುವ ಪ್ರಮುಖ ಸಾಮಗ್ರಿಗಳಾದ ವಿದ್ಯಾ ಪ್ರವೇಶ-ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ ಹಾಗೂ ಮಕ್ಕಳ ಚಟುವಟಿಕೆ ಪುಸ್ತಕಗಳು ತಲುಪಿರುವ ಬಗ್ಗೆ ಶಾಲೆಗಳಿಗೆ ಭೇಟಿ ನೀಡಿ ಖುದ್ದು ಪರಿಶೀಲಿಸಿ, ಖಾತ್ರಿಪಡಿಸಿಕೊಳ್ಳುವುದು.

- ಬಿ.ಆರ್.ಪಿ. ಮತ್ತು ಸಿ.ಆರ್.ಪಿ.ಗಳು ಸದರಿ ಕಾರ್ಯಕ್ರಮಗಳ ಅನುಷ್ಠಾನ ಕುರಿತಂತೆ ತೆಗೆದುಕೊಂಡಿರುವ ಅನುಪಾಲನಾ ಕ್ರಮಗಳನ್ನು ಮೇಲ್ವಿಚಾರಣೆಗೆ ಒಳಪಡಿಸುವುದು.
- ಬ್ಲಾಕ್ ಹಂತಕ್ಕೆ ಲಭ್ಯವಾದ ಶಿಕ್ಷಕರ ಕೈಪಿಡಿಗಳು, ಮಕ್ಕಳ ಅಭ್ಯಾಸ ಪುಸ್ತಕಗಳು ಹಾಗೂ ENK ನಲಿಕಲಿ ಕಲಿಕಾ ಸಾಮಗ್ರಿಗಳು ಎಲ್ಲಾ ಶಾಲೆಗಳಿಗೆ ತಲುಪಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ಈ ಬಾರಿ ಇತರೆ ಮಾಧ್ಯಮದ ಶಾಲೆಗಳಿಗೂ ವಿದ್ಯಾ ಪ್ರವೇಶ ಹಾಗೂ ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿಗಳು ಮತ್ತು ವಿದ್ಯಾರ್ಥಿಗಳ ಚಟುವಟಿಕೆ ಪುಸ್ತಕಗಳು ವಿತರಣೆಯಾಗುತ್ತಿದ್ದು, ಇವುಗಳು ತಲುಪಿರುವ ಬಗ್ಗೆಯೂ **ಬಿ.ಆರ್.ಪಿ. ಮತ್ತು ಸಿ.ಆರ್.ಪಿ.ಗಳಿಂದ ಅನುಪಾಲನಾ ಮಾಹಿತಿಯನ್ನು ಪಡೆಯುವುದು.**

2022–23ನೇ ಶೈಕ್ಷಣಿಕ ಸಾಲಿಗೆ ಪೂರಕವಾಗಿ 01 ರಿಂದ 03ನೇ ತರಗತಿಗಳಿಗೆ ಸಂಬಂಧಿಸಿದಂತೆ ಶಾಲೆ ಆರಂಭವಾದ ದಿನದಿಂದ ಅಗತ್ಯ ಪೂರ್ವಸಿದ್ಧತಾ ಕಲಿಕಾ ಚಟುವಟಿಕೆಗಳನ್ನು ಶಾಲಾ ಕಲಿಕಾ ಪ್ರಕ್ರಿಯೆಯಲ್ಲಿ ಅಳವಡಿಸಬೇಕಿದ್ದು, ಈ ಬಗ್ಗೆ **ಅನುಬಂಧ 01 ಮತ್ತು 02ರಲ್ಲಿ** ತರಗತಿವಾರು ಮತ್ತು ವಿಷಯವಾರು ವಿವರವನ್ನು ನೀಡಲಾಗಿದೆ. ಅನುಷ್ಠಾನದ ಮಾರ್ಗಸೂಚಿಯ ಎಲ್ಲಾ ಅಂಶಗಳು ಪ್ರತೀ ಜಿಲ್ಲೆಯ, ಪ್ರತೀ ಶಾಲೆಗಳಿಗೂ ತಲುಪುವಂತೆ ತುರ್ತು ಕ್ರಮವಹಿಸಲು ಮತ್ತು ಈ ಬಗ್ಗೆ ಖಾತ್ರಿಪಡಿಸಿಕೊಳ್ಳಲು ಜಿಲ್ಲಾ ಹಂತದ ಅಧಿಕಾರಿಗಳಿಗೆ ಸೂಚಿಸಲಾಗಿದೆ.

**'ವಿದ್ಯಾ ಪ್ರವೇಶ'** ಮತ್ತು **'ಕಲಿಕಾ ಚೇತರಿಕೆ'** ಈ ಎರಡೂ ಕಾರ್ಯಕ್ರಮಗಳು ವಿಶಿಷ್ಟವಾಗಿದ್ದು, ಘನ ಕರ್ನಾಟಕ ಸರ್ಕಾರದ ಹಿರಿಮೆಗೆ ಪಾತ್ರವಾಗಿವೆ. ಕೋವಿಡ್ ಸಾಂಕ್ರಾಮಿಕ ಮುನ್ನೆಚ್ಚರಿಕೆಯ ಕ್ರಮಗಳೊಂದಿಗೆ ಅನುಷ್ಠಾನದ ಮಾರ್ಗಸೂಚಿಯಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು 01 ರಿಂದ 03ನೇ ತರಗತಿಗಳಲ್ಲಿ ಕಡ್ಡಾಯವಾಗಿ ಅನುಷ್ಠಾನಕ್ಕೆ ತರುವಂತೆ ನಿರ್ದೇಶನ ನೀಡಲಾಗಿದೆ. ಕಾರ್ಯಕ್ರಮಗಳ ಮೇಲುಸ್ತುವಾರಿ ಮತ್ತು ಮೇಲ್ವಿಚಾರಣೆಗಾಗಿ ಡಿ.ಎಸ್.ಇ.ಆರ್.ಟಿ ಹೊರಡಿಸಿರುವ ಸುತ್ತೋಲೆಯಂತೆ ಅಗತ್ಯ ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳಲು ತಿಳಿಸಲಾಗಿದೆ.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು

**ಪ್ರತಿಯನ್ನು ಗೌರವಪೂರಕವಾಗಿ ಸಲ್ಲಿಸಿದೆ,**

- ✓ **ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇವರ ಆದ್ಯ ಗಮನ ಸೆಳೆಯಲು ಆಪ್ತ ಶಾಖೆಗೆ**
- ✓ **ಮಾನ್ಯ ಆಯುಕ್ತರು, ಸಾ.ಶಿ.ಇ., ಬೆಂಗಳೂರು ಇವರ ಆದ್ಯ ಗಮನ ಸೆಳೆಯಲು ಆಪ್ತ ಶಾಖೆಗೆ**

**ಪ್ರತಿಯನ್ನು ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ,**

1. **ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಕಚೇರಿ ಇವರಿಗೆ**
2. **ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ**
3. **ಮಾನ್ಯ ಅಪರ ಆಯುಕ್ತರು, ಸಾ.ಶಿ.ಇ., ಕಲಬುರಗಿ ಹಾಗೂ ಬೆಳಗಾವಿ ವಿಭಾಗ ಇವರಿಗೆ**
4. **ನಿರ್ದೇಶಕರು, ಸಾ.ಶಿ.ಇ., ಡಿ.ಎಸ್.ಇ.ಆರ್.ಟಿ. ಹಾಗೂ ಪ್ರಾಥಮಿಕ ಶಿಕ್ಷಣ, ಸಾ.ಶಿ.ಇ., ಇವರಿಗೆ**
5. **ನಿರ್ದೇಶಕರು, ಸಾ.ಶಿ.ಇ., ಕಲಬುರಗಿ ಮತ್ತು ಬೆಳಗಾವಿ ವಿಭಾಗ. ಸಾ.ಶಿ.ಇ., ಇವರಿಗೆ**
6. **ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಆಡಳಿತ ಮತ್ತು ಉಪನಿರ್ದೇಶಕರು, ಅಭಿವೃದ್ಧಿ ಇವರಿಗೆ**
7. **ಎಲ್ಲಾ ಜಿಲ್ಲೆಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳು ಇವರಿಗೆ**
8. **ಎಲ್ಲಾ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರು ಇವರಿಗೆ**

ಅನುಬಂಧ–01

## ನಲಿಕಲಿ ಘಟಕಗಳಲ್ಲಿ ಹಾಗೂ ದ್ವಿಭಾಷಾ ತರಗತಿಗಳಲ್ಲಿ ಅನುಷ್ಟಾನಗೊಳಿಸಬೇಕಾದ ಆರಂಭಿಕ ಪೂರ್ವ ಸಿದ್ಧತಾ ಕಲಿಕಾ ಚಟುವಟಿಕೆಗಳು

### ವಿಷಯ: ಕನ್ನಡ – 01 ರಿಂದ 03ನೇ ತರಗತಿ ವಿದ್ಯಾರ್ಥಿಗಳಿಗೂ ಸೇರಿದಂತೆ

| ಮೆಟ್ಟಿಲು ಸಂಖ್ಯೆ | ತರಗತಿ | ಚಟುವಟಿಕೆ ಹೆಸರು | ಲೋಗೋ | ಚಟುವಟಿಕೆ ಶೀರ್ಷಿಕೆ | ಕಲಿಕಾ ಪ್ರಕ್ರಿಯೆ |
|---|---|---|---|---|---|
| 1 | 1 | ಹಾಡು | ಹುಡುಗ–ಹುಡುಗಿ | ಬೇಲಿ ಮೇಲೆ ಹಾರಾಡಿ | ಮೂರು ತರಗತಿ ಮಕ್ಕಳನ್ನು ಒಟ್ಟಿಗೆ ಸೇರಿಸಿ ಹಾಡನ್ನು ಅಭಿನಯದೊಂದಿಗೆ ವಿವಿಧ ರೀತಿಯಲ್ಲಿ (ಸಾಮೂಹಿಕವಾಗಿ, ಗುಂಪಿನಲ್ಲಿ ಇತ್ಯಾದಿ) ಹಾಡಿಸುವುದು. |
| 4 | 1 | ಕಥೆ | ಬಾಯಿ | ಚಿನ್ನದ ಮೊಟ್ಟೆ ಇಡುವ ಕೋಳಿ | ಮೂರೂ ತರಗತಿ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಥೆಯನ್ನು ಹಾವಭಾವದೊಂದಿಗೆ ಹೇಳಿ, ಸರಳಪ್ರಶ್ನೆಗಳನ್ನು ಕೇಳಿ ದೃಢೀಕರಿಸಿಕೊಳ್ಳುವುದು. ಮಕ್ಕಳಿಂದಕಥೆಯನ್ನುಹೇಳಿಸುವುದು. |
| 47 | 3 | ಕ್ರಾಫ್ಟ್ | ಡಬ್ಬಿಯಲ್ಲಿ ಬ್ರಶ್ | ಚಿತ್ರವನ್ನು ಜೋಡಿಸಿ | ಕಾರ್ಡಿನಲ್ಲಿರುವ ಸೂಚನೆ ಅನುಸರಿಸಿ ಚಟುವಟಿಕೆ ಮಾಡಿಸುವುದು. ಜೊತೆಗೆ ಬೇರೆ ಬೇರೆ ಚಿತ್ರಗಳನ್ನುಇದೇ ರೀತಿ ಕತ್ತರಿಸಿ ಜೋಡಿಸುವ ಚಟುವಟಿಕೆಮಾಡಿಸುವುದು |
| 1 | 2 | ಹಾಡು | ಹುಡುಗ–ಹುಡುಗಿ | ಬೆಳ್ಳಿಚುಕ್ಕಿ ಮೂಡಿತಕ್ಕ | ಮೂರೂ ತರಗತಿ ಮಕ್ಕಳನ್ನು ಒಟ್ಟಿಗೆ ಸೇರಿಸಿ ಹಾಡನ್ನು ಅಭಿನಯದೊಂದಿಗೆ ವಿವಿಧ ರೀತಿಯಲ್ಲಿ ಹಾಡಿಸುವುದು. ಸರಳ ಪ್ರಶ್ನೆಗಳನ್ನು ಕೇಳಿ ದೃಢೀಕರಿಸಿಕೊಳ್ಳುವುದು. |
| 147 | 2 | ಕಥೆ | ಬಾಯಿ | ಜಂಭದತಾವರೆ | ಮೂರೂ ತರಗತಿ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಥೆಯನ್ನು ಹಾವಭಾವದೊಂದಿಗೆ ಹೇಳಿ, ಸರಳ ಪ್ರಶ್ನೆಗಳನ್ನು ಕೇಳಿ ದೃಢೀಕರಿಸಿಕೊಳ್ಳುವುದು. ಮಕ್ಕಳಿಂದ ಸ್ಥಳೀಯ ಪರಿಚಿತ ಕಥೆಗಳನ್ನು ಹೇಳಿಸುವುದು. |
| 90 | 2 | ಕ್ರಾಫ್ಟ್ | ಡಬ್ಬಿಯಲ್ಲಿ ಬ್ರಶ್ | ಬಿಂದಿಗಳಿಂದ ಚಿತ್ರರಚನೆ | ಮೂರೂ ತರಗತಿ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಾರ್ಡಿನಲ್ಲಿರುವ ಸೂಚನೆಗಳನ್ನು ಆಧರಿಸಿ ವಿವಿಧ ಒತ್ತು ಚಿತ್ರಗಳನ್ನು ಮಾಡಿಸುವುದು. |
| 1 | 3 | ಹಾಡು | ಹುಡುಗ–ಹುಡುಗಿ | ಕೊಲ್ಲಾರಿ ಬಂಡಿ | ಮೂರೂ ತರಗತಿ ಮಕ್ಕಳನ್ನು ಒಟ್ಟಿಗೆ ಸೇರಿಸಿ ಹಾಡನ್ನುಅಭಿನಯದೊಂದಿಗೆ ವಿವಿಧ ರೀತಿಯಲ್ಲಿ ಹಾಡಿಸುವುದು. ಸರಳ ಪ್ರಶ್ನೆಗಳನ್ನುಕೇಳಿ ದೃಢೀಕರಿಸಿಕೊಳ್ಳುವುದು. |
| 2 | 3 | ಕಥೆ | ಬಾಯಿ | ಬುದ್ಧಿವಂತ ಮಹಿಳೆ | ಮೂರೂ ತರಗತಿ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಥೆಯನ್ನು ಹಾವಭಾವದೊಂದಿಗೆ ಹೇಳಿ, ಸರಳ ಪ್ರಶ್ನೆಗಳನ್ನು ಕೇಳಿ ದೃಢೀಕರಿಸಿಕೊಳ್ಳುವುದು. ಮಕ್ಕಳಿಂದ ಸ್ಥಳೀಯ ಕಥೆಗಳನ್ನು ಹೇಳಿಸುವುದು. |
| 18 | 3 | ಕ್ರಾಫ್ಟ್ | ಡಬ್ಬಿಯಲ್ಲಿ ಬ್ರಶ್ | ಒರಿಗಾಮಿ | ಮೂರೂ ತರಗತಿ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಾರ್ಡಿನಲ್ಲಿರುವ ಸೂಚನೆಗಳನ್ನು ಆಧರಿಸಿ ಒರಿಗಾಮಿ ಮಾಡಿಸುವುದು. ಹಿಂದಿನ ದಿನದಲ್ಲಿ ಮತ್ತು ಈ ದಿನ ಮಾಡಿದ ಕ್ರಾಫ್ ಚಟುವಟಿಕೆಯ ಕಾರ್ಡುಗಳಲ್ಲಿ ಆಯ್ದವುಗಳನ್ನು ಕಲಿಕಾ ಚಪ್ಪರದಲ್ಲಿ ನೇತುಹಾಕುವುದು. |
| 11 | 1 | ಹಾಡು | ಹುಡುಗ–ಹುಡುಗಿ | ಚಂದಮಾಮ ಬಾರಯ್ಯ | ಮೂರೂ ತರಗತಿ ಮಕ್ಕಳನ್ನು ಒಟ್ಟಿಗೆ ಸೇರಿಸಿ ಹಾಡನ್ನು ಅಭಿನಯದೊಂದಿಗೆ ವಿವಿಧ ರೀತಿಯಲ್ಲಿ ಹಾಡಿಸುವುದು. ಸರಳ ಪ್ರಶ್ನೆಗಳನ್ನು ಕೇಳಿ ದೃಢೀಕರಿಸಿಕೊಳ್ಳುವುದು. |
| 4 | 2 | ಸರಳ ಸಂಭಾಷಣೆ | ಇಲಿಗಳ ಮಧ್ಯೆ ಘಂಟೆ | ಮೊಸಳೆಮತ್ತು ಜಿಂಕೆ | ಶಿಕ್ಷಕರೇ ಸಂಭಾಷಣೆಯನ್ನು ಧ್ವನಿಯ ಏರಿಳಿತದೊಂದಿಗೆ ಹೇಳುವುದು. ನಂತರ ಮಕ್ಕಳಿಂದ ಹೇಳಿಸಲು ಪ್ರಯತ್ನಿಸುವುದು. ಸಾಧ್ಯವಾದಲ್ಲಿ ಪೊಪೆಟ್, ಮುಖವಾಡಗಳನ್ನು ಬಳಸಿಕೊಳ್ಳುವುದು |
| 198 | 2 | ಚ/ಆಟ | ಡಬ್ಬದ ಮೇಲೆ ಮಂಗ | ಅಂತ್ಯಾಕ್ಷರಗಳಿಂದ ಪದಗಳನ್ನು ರಚಿಸುವುದು. | ಕಾರ್ಡಿನಲ್ಲಿರುವ ಸೂಚನೆಗಳನ್ನುಅನುಸರಿಸಿ ಆಟಆಡಿಸುವುದು. ಮೊದಲುಶಿಕ್ಷಕರೇ ವಿವರಣೆ ನೀಡಿ ಚಟುವಟಿಕೆ ಮಾಡುವುದು. ಅಗತ್ಯ ಹಿಮ್ಮಾಹಿತಿಗಳನ್ನು ನೀಡುವುದು. |
| 244 | 1 | ಚ/ಆಟ | ಡಬ್ಬದ ಮೇಲೆ ಮಂಗ | ಟೋಪಿಬೇಕಾ ಟೋಪಿ | ಕಾರ್ಡಿನಲ್ಲಿರುವ ಸೂಚನೆಗಳನ್ನುಅನುಸರಿಸಿ ಆಟಆಡಿಸುವುದು. ಮೊದಲು ಶಿಕ್ಷಕರೇ ವಿವರಣೆ ನೀಡಿ ಚಟುವಟಿಕೆ ಮಾಡುವುದು. ಅಗತ್ಯ ಹಿಮ್ಮಾಹಿತಿಗಳನ್ನು ನೀಡುವುದು. |
| 93 | 3 | ಆಡಿಕಲಿ | ಪುಟ್ಟ ಮಗು | ನೆನಪಿನಂಗಳ | ಕಾರ್ಡಿನಲ್ಲಿರುವ ಸೂಚನೆ ಅನುಸರಿಸಿ ಚಟುವಟಿಕೆ ಮಾಡಿಸುವುದು .ಜೊತೆಗೆ ಹೊರಾಂಗಣದಲ್ಲಿ |

| | | | | |
|---|---|---|---|---|
| | | | | ಮಕ್ಕಳು ನೋಡಿರುವ ವಸ್ತುಗಳ ಹೆಸರನ್ನು ಹೇಳಿಸುವುದು. |
| 158 | 1 | ಹಾಡು | ಹುಡುಗ–ಹುಡುಗಿ | ಪುಟ್ಟಪುಟ್ಟ ನವಿಲೆ | ಮೂರು ತರಗತಿ ಮಕ್ಕಳನ್ನು ಒಟ್ಟಿಗೆ ಸೇರಿಸಿ ಹಾಡನ್ನು ಅಭಿನಯದೊಂದಿಗೆ ವಿವಿಧ ರೀತಿಯಲ್ಲಿ ಹಾಡಿಸುವುದು ಸರಳ ಪ್ರಶ್ನೆಗಳನ್ನು ಕೇಳಿ ದೃಢೀಕರಿಸಿಕೊಳ್ಳುವುದು. ಕಾರ್ಡಿನಲ್ಲಿರುವ ಸೂಚನೆ ಅನುಸರಿಸಿ ಚಟುವಟಿಕೆ ಮಾಡಿಸುವುದು. |
| 8 | 1 | ತಾರಾನಾಥ | ತಾರಾನಾಥ | ತಾರಾನಾಥ | ಕಾರ್ಡಿನಲ್ಲಿರುವ ಸೂಚನೆ ಅನುಸರಿಸಿ ಚಟುವಟಿಕೆ ಮಾಡಿಸುವುದು. |
| 9 | 1 | ಸೀತಾಫಲ | ಸೀತಾಫಲ | ಸೀತಾಫಲ | ಕಾರ್ಡಿನಲ್ಲಿರುವ ಸೂಚನೆ ಅನುಸರಿಸಿ ಚಟುವಟಿಕೆ ಮಾಡಿಸುವುದು. |
| 7 | 1 | ಕ್ರಾಫ್ಟ್ | ಡಬ್ಬಿಯಲ್ಲಿ ಬ್ರಶ್ | ಆಕಾರಗಳ ಸ್ಪ್ರೇ | ಮೂರೂ ತರಗತಿ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಾರ್ಡಿನಲ್ಲಿರುವ ಸೂಚನೆಗಳನ್ನು ಆಧರಿಸಿ ಒತ್ತು ಚಿತ್ರಗಳನ್ನು ಮಾಡಿಸುವುದು.. |
| 65 | 2 | ಹಾಡು | ಹುಡುಗ–ಹುಡುಗಿ | ಕೈಯಲ್ಲೀ ಕಿನ್ನೂರಿ | ಮೂರೂ ತರಗತಿ ಮಕ್ಕಳನ್ನು ಒಟ್ಟಿಗೆ ಸೇರಿಸಿ ಹಾಡನ್ನು ಅಭಿನಯದೊಂದಿಗೆ ವಿವಿಧ ರೀತಿಯಲ್ಲಿ ಹಾಡಿಸುವುದು. ಸರಳ ಪ್ರಶ್ನೆಗಳನ್ನು ಕೇಳಿ ದೃಢೀಕರಿಸಿಕೊಳ್ಳುವುದು. |
| 119 | 3 | ಆಡಿಕಲಿ | ಪುಟ್ಟ ಮಗು | ನಾಲಿಗೆ ಸುರುಳಿಗಳು | ಕಾರ್ಡಿನಲ್ಲಿರುವ ಸೂಚನೆ ಅನುಸರಿಸಿ ಚಟುವಟಿಕೆ ಮಾಡಿಸುವುದು. ಇಂತಹ ಇನ್ನಿತರ ನಾಲಿಗೆ ಸುರುಳಿ ಪದ/ವಾಕ್ಯಗಳನ್ನು ಸಂಗ್ರಹಿಸಿ ಬಳಸಿಕೊಳ್ಳುವುದು. |
| 10 | 1 | ರೇಖಾಭ್ಯಾಸ | ಜೋಡಿ ಪೆನ್ಸಿಲ್ | ರೇಖಾಭ್ಯಾಸ | ಅಭ್ಯಾಸ ಪುಸ್ತಕದಲ್ಲಿರುವರೇ ಖಾಭ್ಯಾಸಗಳನ್ನು ನಿಯಮ ಅನುಸರಿಸಿ ಮಾಡಿಸುವುದು |
| 3 | 2 | ಸೇತುಬಂಧ | ಜೋಡಿ ಪೆನ್ಸಿಲ್ | ಸೇತುಬಂಧ | ಅಭ್ಯಾಸ ಪುಸ್ತಕದಲ್ಲಿರುವ ಸೇತುಬಂಧ ಚಟುವಟಿಕೆಯನ್ನು ಮಾಡಿಸಿ ಕಲಿಕೆಯನ್ನು ದೃಢೀಕರಿಸಿಕೊಳ್ಳುವುದು. |
| 3, 4 | 3 | ಸೇತುಬಂಧ | ಜೋಡಿ ಪೆನ್ಸಿಲ್ | ಸೇತುಬಂಧ | ಅಭ್ಯಾಸ ಪುಸ್ತಕದಲ್ಲಿರುವ ಸೇತುಬಂಧ ಚಟುವಟಿಕೆಯನ್ನು ಮಾಡಿಸಿ ಕಲಿಕೆಯನ್ನು ದೃಢೀಕರಿಸಿಕೊಳ್ಳುವುದು. |

**ವಿಷಯ: ಗಣಿತ – 01 ರಿಂದ 03ನೇ ತರಗತಿ ವಿದ್ಯಾರ್ಥಿಗಳಿಗೂ ಸೇರಿದಂತೆ**

| ಮೆಟ್ಟಿಲು ಸಂಖ್ಯೆ | ಚಟುವಟಿಕೆ ಹೆಸರು | ಲೋಗೋ | ಚಟುವಟಿಕೆ ಶೀರ್ಷಿಕೆ | ಕಲಿಕಾ ಪ್ರಕ್ರಿಯೆ |
|---|---|---|---|---|
| 25 | ಹಾಡು | ಕೋಗಿಲೆ | ಭೂಮಿಗೆ ಸೂರ್ಯ ಒಂದು | 1ನೇ ತರಗತಿಯ 25ನೇ ಮೆಟ್ಟಿಲು ಸಂಖ್ಯೆಯ ಕಾರ್ಡನ್ನು ಬಳಸಿ ಮೂರು ತರಗತಿಯ ಮಕ್ಕಳಿಗೆ ಹಾಡನ್ನು ಸೂಚನೆಗೆ ಅನುಸಾರವಾಗಿ ಹಾವಭಾವದೊಂದಿಗೆ ಚಟುವಟಿಕೆ ಮಾಡಿಸುವುದು. |
| 40 | ಹಾಡು | ಕೋಗಿಲೆ | ಒಂದು ಕಾಗೆ ಬಂದಿತು | 1ನೇ ತರಗತಿಯ 40ನೇ ಮೆಟ್ಟಿಲು ಸಂಖ್ಯೆಯ ಕಾರ್ಡನ್ನು ಬಳಸಿ ಮೂರು ತರಗತಿಯ ಮಕ್ಕಳಿಗೆ ಹಾಡನ್ನು ಸೂಚನೆಗೆ ಅನುಸಾರವಾಗಿ ಹಾವಭಾವದೊಂದಿಗೆ ಚಟುವಟಿಕೆ ಮಾಡಿಸುವುದು. |
| 1 | ಪೂ.ಭಾ.ಚ | ಮೊ.ಹೊ.ಕೋ.ಮ | ಲಕ್ಷಣಗಳನ್ನು ಆಧರಿಸಿ ವಿಂಗಡಣೆ | 1ನೇ ತರಗತಿಯ ಕಾರ್ಡನ್ನು ಬಳಸಿ ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಾರ್ಡಿನಲ್ಲಿರುವ ಸೂಚನೆಗಳನ್ನು ಅನುಸರಿಸಿ ನಿರ್ವಹಿಸುವುದು. |
| 2 | ಪೂ.ಭಾ.ಚ | ಪೆಂಗ್ವಿನ್ | ಆಕಾರ ಲಕ್ಷಣಗಳನ್ನು ಆಧರಿಸಿ ವಿಂಗಡಣೆ | 1ನೇ ತರಗತಿಯ ಮಕ್ಕಳಿಗೆ ಅಭ್ಯಾಸ ಪುಸ್ತಕವನ್ನು ನೀಡಿ ಚಟುವಟಿಕೆಯನ್ನು ನಿರ್ವಹಿಸಲು ಸೂಚನೆ ನೀಡುವುದು. 2 ಮತ್ತು 3ನೇ ತರಗತಿ ವಿದ್ಯಾರ್ಥಿಗಳ ಸಹಕಾರ ಪಡೆಯುವುದು. |
| 3 | ಪೂ.ಭಾ.ಚ | ಮೊ.ಹೊ.ಕೋ.ಮ | ವಿಂಗಡಣೆ | ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಾರ್ಡಿನಲ್ಲಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 4 | ಪೂ.ಭಾ.ಚ | ಪೆಂಗ್ವಿನ್ | ವಿಂಗಡಣೆ | ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 5 | ಪೂ.ಭಾ.ಚ | ಪೆಂಗ್ವಿನ್ | ಅಳತೆ ಆಧರಿಸಿ ವಿಂಗಡಣೆ | ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |

| | | | | |
|---|---|---|---|---|
| 6 | ಪೂ.ಭಾ.ಚ | ಪೆಂಗ್ವಿನ್ | ಬಣ್ಣ ತುಂಬು | ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಅಭ್ಯಾಸ ಪುಸ್ತಕದಲಿ ನೀಡಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 7 | ಪೂ.ಭಾ.ಚ | ಮೊ.ಹೊ. ಕೋ.ಮ | ಸ್ಥಾನಗಳು ಮೇಲೆ –ಕೆಳಗೆ | 1ನೇ ತರಗತಿಯ ಕಾರ್ಡನ್ನು ಬಳಸಿ ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಾರ್ಡಿನಲ್ಲಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 8 | ಪೂ.ಭಾ.ಚ | ಪೆಂಗ್ವಿನ್ | ಸ್ಥಾನಗಳು ಮೇಲೆ –ಕೆಳಗೆ | ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 9 | ಪೂ.ಭಾ.ಚ | ಮೊ.ಹೊ.ಕೊ ೀ.ಮ | ಎಡ–ಬಲ–ಮಧ್ಯೆ | 1ನೇ ತರಗತಿಯ ಕಾರ್ಡನ್ನು ಬಳಸಿ ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಾರ್ಡಿನಲ್ಲಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 10 | ಪೂ.ಭಾ.ಚ | ಪೆಂಗ್ವಿನ್ | ಎಡ–ಬಲ–ಮಧ್ಯೆ ಗುರುತಿಸು | 1ನೇ ತರಗತಿಯ ಮಕ್ಕಳ ಅಭ್ಯಾಸ ಪುಸ್ತಕವನ್ನು ಬಳಸಿಕೊಂಡು 1, 2 ಮತ್ತು 3ನೆಯ ತರಗತಿ ವಿದ್ಯಾರ್ಥಿಗಳಿಗೆ ಈ ಚಟುವಟಿಕೆಯನ್ನು ನಿರ್ವಹಿಸುವುದು. |
| 11 | ಪೂ.ಭಾ.ಚ | ಮೊ.ಹೊ. ಕೋ.ಮ | ಸ್ಥಾನಗಳು | 1ನೇ ತರಗತಿಯ ಕಾರ್ಡನ್ನು ಬಳಸಿ ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಾರ್ಡಿನಲ್ಲಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 12 | ಪೂ.ಭಾ.ಚ | ಪೆಂಗ್ವಿನ್ | ಹಿಂದೆ–ಮುಂದೆ–ಮಧ್ಯೆ | ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 13 | ಪೂ.ಭಾ.ಚ | ಮೊ.ಹೊ. ಕೋ.ಮ | ಸ್ಥಾನಗಳು | ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಾರ್ಡಿನಲ್ಲಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 14 | ಪೂ.ಭಾ.ಚ | ಪೆಂಗ್ವಿನ್ | ಹತ್ತಿರ–ದೂರ | ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 15 | ಪೂ.ಭಾ.ಚ | ಮೊ.ಹೊ. ಕೋ.ಮ | ಎಣಿಕೆ | 1ನೇ ತರಗತಿಯ ಕಾರ್ಡನ್ನು ಬಳಸಿ ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಾರ್ಡಿನಲ್ಲಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 16 | ಪೂ.ಭಾ.ಚ | ಪೆಂಗ್ವಿನ್ | ಒಂದು ಮತ್ತು ಹಲವು | ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 17 | ಪೂ.ಭಾ.ಚ | ಮೊ.ಹೊ. ಕೋ.ಮ | ತೂಕ–ಗಾತ್ರ | 1ನೇ ತರಗತಿಯ ಕಾರ್ಡನ್ನು ಬಳಸಿ ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಾರ್ಡಿನಲ್ಲಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 18 | ಪೂ.ಭಾ.ಚ | ಪೆಂಗ್ವಿನ್ | ಚಿಕ್ಕದು–ದೊಡ್ಡದು | ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 19 | ಪೂ.ಭಾ.ಚ | ಮೊ.ಹೊ. ಕೋ.ಮ | ಆಕಾರಗಳ ಹೋಲಿಕೆ | 1ನೇ ತರಗತಿಯ ಕಾರ್ಡನ್ನು ಬಳಸಿ ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಾರ್ಡಿನಲ್ಲಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 20 | ಪೂ.ಭಾ.ಚ | ಪೆಂಗ್ವಿನ್ | ಎತ್ತರ–ಗಿಡ್ಡ | ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಅಭ್ಯಾಸ ಪುಸ್ತಕದಲಿ ನೀಡಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 21 | ಪೂ.ಭಾ.ಚ | ಪೆಂಗ್ವಿನ್ | ತೂಕ–ಭಾರ–.ಹಗುರ | ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಅಭ್ಯಾಸ ಪುಸ್ತಕದಲಿ ನೀಡಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 22 | ಪೂ.ಭಾ.ಚ | ಮೊ.ಹೊ. ಕೋ.ಮ | ಹೆಚ್ಚು–ಕಡಿಮೆ–ಸಮ | 1ನೇ ತರಗತಿಯ ಕಾರ್ಡನ್ನು ಬಳಸಿ ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಕಾರ್ಡಿನಲ್ಲಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 23 | ಪೂ.ಭಾ.ಚ | ಪೆಂಗ್ವಿನ್ | ಹೆಚ್ಚು–ಕಡಿಮೆ–ಸಮ | ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 24 | ಪೂ.ಭಾ.ಚ | ಪೆಂಗ್ವಿನ್ | ಹೆಚ್ಚು–ಕಡಿಮೆ–ಸಮ ಗುರುತಿಸು | ಮೂರೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ನಿರ್ವಹಿಸುವುದು. |
| 1 | ಪೂ.ಭಾ.ಚ | ಮೊ.ಹೊ. ಕೋ.ಮ | ಚಪ್ಪಾಳೆ ಆಟ | 2ನೇ ತರಗತಿಯ 1ನೇ ಮೆಟ್ಟಿಲು ಸಂಖ್ಯೆಯ ಕಾರ್ಡನ್ನು ಬಳಸಿ ಮೂರು ತರಗತಿಯ ಮಕ್ಕಳಿಗೆ ಆಟವನ್ನು ಆಡಿಸುವುದು. |

| | | | | |
|---|---|---|---|---|
| 2 | ಪೂ.ಭಾ.ಚ | ಪೆಂಗ್ವಿನ್ | ಪೂರ್ವಭಾವಿ ಚಟುವಟಿಕೆ | ಹಿಂದಿನ ತರಗತಿಯ ಎಲ್ಲ ಕಲಿಕಾಂಶಗಳನ್ನು ಹೊಂದಿರುವ ಪುನರ್ಬಲನ ಚಟುವಟಿಕೆಗಳನ್ನು ಅಭ್ಯಾಸ ಪುಸ್ತಕದಲ್ಲಿ ನೀಡಲಾಗಿದ್ದು ಪ್ರತಿ ವಿದ್ಯಾರ್ಥಿಗೆ ಅಭ್ಯಾಸ ಪುಸ್ತಕವನ್ನು ನೀಡಿ ಉತ್ತರಿಸಲು ತಿಳಿಸುವುದು. |
| 3 | ಪೂ.ಭಾ.ಚ | ಪೆಂಗ್ವಿನ್ | ಪೂರ್ವಭಾವಿ ಚಟುವಟಿಕೆ | |
| 4 | ಪೂ.ಭಾ.ಚ | ಪೆಂಗ್ವಿನ್ | ಪೂರ್ವಭಾವಿ ಚಟುವಟಿಕೆ | |
| 5 | ಪೂ.ಭಾ.ಚ | ಪೆಂಗ್ವಿನ್ | ಪೂರ್ವಭಾವಿ ಚಟುವಟಿಕೆ | |
| 1 | ಪೂ.ಭಾ.ಚ | ಪೆಂಗ್ವಿನ್ | ಪೂರ್ವಭಾವಿ ಚಟುವಟಿಕೆ | ಹಿಂದಿನ ತರಗತಿಯ ಎಲ್ಲ ಕಲಿಕಾಂಶಗಳನ್ನು ಹೊಂದಿರುವ ಪುನರ್ಬಲನ ಚಟುವಟಿಕೆಗಳನ್ನು ಅಭ್ಯಾಸ ಪುಸ್ತಕದಲ್ಲಿ ನೀಡಲಾಗಿದ್ದು ಪ್ರತಿ ವಿದ್ಯಾರ್ಥಿಗೆ ಅಭ್ಯಾಸ ಪುಸ್ತಕವನ್ನು ನೀಡಿ ಉತ್ತರಿಸಲು ತಿಳಿಸುವುದು. |
| 2 | ಪೂ.ಭಾ.ಚ | ಪೆಂಗ್ವಿನ್ | ಪೂರ್ವಭಾವಿ ಚಟುವಟಿಕೆ | |
| 3 | ಪೂ.ಭಾ.ಚ | ಪೆಂಗ್ವಿನ್ | ಪೂರ್ವಭಾವಿ ಚಟುವಟಿಕೆ | |

**ವಿಷಯ: ಪರಿಸರ ಅಧ್ಯಯನ – 01 ರಿಂದ 03ನೇ ತರಗತಿ ವಿದ್ಯಾರ್ಥಿಗಳಿಗೂ ಸೇರಿದಂತೆ**

| ಮೆಟ್ಟಿಲು ಸಂಖ್ಯೆ | ಚಟುವಟಿಕೆ ಹೆಸರು | ಲೋಗೋ | ಚಟುವಟಿಕೆ ಶೀರ್ಷಿಕೆ | ಕಲಿಕಾ ಪ್ರಕ್ರಿಯೆ |
|---|---|---|---|---|
| 1 | ಹಾಡು | ದುಂಬಿ | ಪುಟ್ಟ ಮಗು | ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಶಿಕ್ಷಕರು ರಾಗವಾಗಿ ಅಭಿನಯದೊಂದಿಗೆ ಹಾಡಿಸುವದು |
| 2 | ಕ್ರಾಫ್ಟ್ | ಪೆನ್ಸಿಲ್ | ದಾರದಿಂದ ಚಿತ್ರ | ಕಾರ್ಡಿನಲ್ಲಿರುವ ಸೂಚನೆಗೆ ಅನುಸಾರವಾಗಿ ದಾರದಿಂದ ಚಿತ್ರ ವನ್ನು ಮಕಕಳಿಂದ ಮಾಡಿಸುವದು. |
| 3 | ಚ/ಆಟ | ವಿಮಾನಚಿಟ್ಟೆ | ಪುರ್ ಆಟ | ಕಾರ್ಡಿನಲ್ಲಿರುವ ಸೂಚನೆಯಂತೆ ಮಕ್ಕಳಿಗೆ ಪುರ್ ಆಟ ಆಡಿಸುವದು. |
| 4 | ಹಾಡು | ದುಂಬಿ | ನಮ್ಮ ಕೂಗು | ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಶಿಕ್ಷಕರು ರಾಗವಾಗಿ ಅಭಿನಯದೊಂದಿಗೆ ಹಾಡಿಸುವದು |
| 5 | ಚಟುವಟಿಕೆ | ವಿಮಾನಚಿಟ್ಟೆ | ಕೋರಿಕೆ ಆಟ | ಕಾರ್ಡಿನಲ್ಲಿರುವ ಸೂಚನೆಯಂತೆ ಮಕ್ಕಳಿಗೆ ಪುರ್ ಆಟ ಆಡಿಸುವದು. |
| 6 | ಸ.ಪ್ರಯೋಗ | ಜೇಡ | ತೇಲು,ಮುಳುಗು | ಕಾರ್ಡಿನಲ್ಲಿರುವ ಸೂಚನೆಯಂತೆ ಮಕ್ಕಳಿಗೆ ಪ್ರಯೋಗ ಮಾಡಿ ತೋರಿಸಿ ಅವರಿಗೂ ಮಾಡಲು ಪ್ರೇರೆಪಿಸುವದು. |
| 7 | ಹಾಡು | ದುಂಬಿ | ಜ್ಞಾನೇಂದ್ರಿಯಗಳು | ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಶಿಕ್ಷಕರು ರಾಗವಾಗಿ ಅಭಿನಯದೊಂದಿಗೆ ಹಾಡಿಸುವದು |
| 8 | ಪಪೆಟ್ ಷೊ | ಹತ್ತಿಗೊಂಬೆ | ಉಪಾಯ | ಮೇಲಿನ ತರಗತಿಯ ಮಕ್ಕಳ ಸಹಕಾರದಿಂದ ಪಪೆಟ್ ಷೋ ಮಾಡಿ ತೋರಿಸುವದು. |
| 9 | ಸ.ಪ್ರಯೋಗ | ಜೇಡ | ಗಾಳಿ ಇರುವಿಕೆ | ಕಾರ್ಡಿನಲ್ಲಿರುವ ಸೂಚನೆಯಂತೆ ಮಕ್ಕಳಿಗೆ ಪ್ರಯೋಗ ಮಾಡಿ ತೋರಿಸಿ ಅವರಿಗೂ ಮಾಡಲು ಪ್ರೇರೆಪಿಸುವದು. |
| 10 | ಹ.ನಕ್ಷೆ | ಸೂರ್ಯ & ಮೋಡ | ಹವಾಮಾನ ನಕ್ಷೆ | ಹವಾಮಾನ ನಕ್ಷೆಯಲ್ಲಿನ ಚಿತ್ರಗಳನ್ನು ಗುರ್ತಿಸಿ ಹೇಳುವದನ್ನು ರೂಢಿಸುವದು. |

**ಸೂಚನೆ:**

- ಇಂಗ್ಲಿಷ್ ನಲಿಕಲಿಗೆ ಸಂಬಂಧಿಸಿದಂತೆ 01, 02 ಮತ್ತು 03ನೇ ತರಗತಿಗಳಿಗೆ ಇ.ಎನ್.ಕೆ ಲೆವೆಲ್–01ರಲ್ಲಿನ Listening & Speaking (L&S) ಚಟುವಟಿಕೆಗಳನ್ನು ಶಾಲೆ ಆರಂಭಧ ಪೂರ್ವ ಸಿದ್ಧತಾ ಕಲಿಕಾ ಚಟುವಟಿಕೆಗಳ ಭಾಗವಾಗಿ ಶಾಲೆಗಳಲ್ಲಿ ಅನುಷ್ಠಾನಿಸುವುದು.
- ಉರ್ದು ಮಾಧ್ಯಮದ ಶಾಲೆಗಳಲ್ಲಿ 01 ಮತ್ತು 02ನೇ ತರಗತಿಯ ನಲಿಕಲಿ ಏಣಿಯಲ್ಲಿನ ಪೂರ್ವಭಾವಿ ಸಿದ್ಧತಾ ಚಟುವಟಿಕೆಗಳನ್ನು ಎರಡೂ ತರಗತಿಗಳಿಗೂ ಸೇರಿದಂತೆ ಶಾಲೆ ಆರಂಭದ ಪೂರ್ವ ಸಿದ್ಧತಾ ಕಲಿಕಾ ಚಟುವಟಿಕೆಗಳ ಭಾಗವಾಗಿ ಶಾಲೆಗಳಲ್ಲಿ ಅನುಷ್ಠಾನಿಸುವುದು.
- ಇತರೆ ಮಾಧ್ಯಮದ ಎಲ್ಲಾ ಶಾಲೆಗಳಲ್ಲಿ 01 ರಿಂದ 03ನೇ ತರಗತಿಗೆ ಪೂರಕವಾಗಿ ಪೂರ್ವಸಿದ್ಧತಾ ಕಲಿಕಾ ಚಟುವಟಿಕೆಗಳನ್ನು ರೂಪಿಸಿ, ಅನುಷ್ಠಾನಿಸಲು ಕ್ಷೇತ್ರ ಹಂತದಲ್ಲಿ ಕ್ರಮವಹಿಸುವಂತೆ ತಿಳಿಸಲಾಗಿದೆ.

Annexure -02

## TRANSITION PERIOD TASKS FOR BILINGUAL SCHOOLS

*The objective of the transition period plan is to make children who are encountering English medium for the first time become comfortable and familiar with both the school environment and the language environment in the school. Creating interest and retaining the child in school is a real challenge in which teacher can succeed only if there is a plan to engage young learners in joyful activities. Comprehensible input through a fine blend of mother tongue and English can create strong base for learning. This transition period plan with its fund of simple and interesting activities provides a kind of preparatory experience to the learners. The activities aim at providing an easy and joyful start to lead young learners to become confident in learning English through content and content through English.*

**Note to Teachers:** ***The transition period tasks prepare the English medium children to become confident in the five language competencies: 1.Thinking 2. listening, 3. speaking 4. reading and 5.writing. The main activity outlined daily will help in preparing children with basic concepts and vocabulary of the Class 2 English, Maths and EVS.***

**The daily schedule is suggested as follows:**

- *An Hour of Hello English Activities*
- *Speaking Time*
- *Activities to develop conceptual understanding*
- *An hour of quiet time for reading and discussion*

### Preparation

*The teachers need to prepare a reading corner in their classrooms and stock it with small picture books in English which the children can browse through. This is mandatory for developing good reading skills.*

*Hello English is a complete resource for helping children to develop confidence and enjoy learning. Teachers will need to go through the content of Hello English in order to plan the activities that they would like to do in the class.*

*There are a few activities which need prior preparation. The index at the end will guide teachers to be ready with the TLMs.*

**Some Points for consideration**

- *The activities are graded from easy to difficult so as to make the learning more effective, interesting and long lasting.*
- *Activities are split so that sufficient time shall be spent on making the learners acquire the concept to the mastery level.*
- *Teachers have to prepare necessary TLM and plan the execution of the activities well in advance and also have to make necessary arrangements in and out of the classroom.*
- *Teachers have the liberty to make necessary changes to make the activities more effective and interesting.*
- *Teachers shall use bilingual and multilingual approach wherever necessary to make learning successful.*
- *Teachers are free to make necessary changes in the time table as per their children's' interest and need.*
- *Teachers have to find other sources in case there is no projector - like picture cards, etc.*
- *A few interesting activities from Class 1 may be repeated to make the learning lively.*

- *Teachers may conduct some of the activities in Kannada first (using code mixing and code switching) and then do the same in English.*
- *A few activities, songs, recitations and stories from Class 2 textbooks could be taken while transacting these activities to create curiosity and interest.*
- *Rhymes, songs and stories from any other sources may be used both in English, Kannada and local languages to increase the experience of language and culture.*
- *Understanding or comprehension, independent use of language and ideas and active participation shall be the focus in all activities.*
- *There are many activity books in the folder titled Additional Resources on all subjects. Use those activities whenever possible.*

*Note: For details of the given activities refer to EMTIP Module -1 for classes 1 and 2 EMTIP Module-2 for classess-3 and 4*

**Transition Period Tasks – Class 1 and 2**

| *S. No* | *Activity Name* | *What to do in the activity* |
|---|---|---|
| 1 | Colour Club | Familiarize colours to learners using the following lines |
| 2 | What do you see? | Familiarize the spot to learners – Home, School, Bus stand, Market, Park, etc. |
| 3 | Where are you, my friend? | Familiarize directions to the learners |
| 4 | Form the shapes | Familiarize shapes |
| 5 | Shapes | Familiarize shapes |
| 6 | Professions | Familiarize different professions |
| 7 | I am a kite | Familiarize simple sentences |
| 8 | Discovery Time | Familiarize numbers |
| 9 | Think and tell | Familiarize different colours and data handling |
| 10 | Guessing game | Children follow the instructions and do the action. Eg: riding bicycle, blowing balloon, etc. |
| 11 | My Name | Familiarize names |
| 12 | Shapes | Colour and match the shapes in the given pictures. |
| 13 | Animal around us | Identify animals |
| 14 | Opposite Words | Identify opposites through pictures. |
| 14. | Name Me | Identify the names of the given objects |
| 15 | Name Me | Identify the names of the given objects |
| 16 | Can you Recall? | Observe and recall shown things. |
| 17 | Similar or Different | Observe the pictures and find out the similarity |
| 18 | Similar or different | Observe pictures and find out differences. |
| 19 | I can tell | Observe pictures and talk about them using a few English words. |
| 20 | Let us name the things we see | Sequencing the pictures |
| 21 | Let us name the things we see | Observe and write the words with the help of teachers |
| 22 | Can you match? | Match the word card with the word written on the board |
| 23 | Letter cards | Identify the upper case and lowercase letters. |
| 24 | Pick and Match | Pick any letter card of uppercase and match with lowercase letter card. |
| 25 | Where can I fit??? | Put the letters appropriately in the given box |
| 26 | I know how to write! | Circle the correct shaped letter |
| 27 | Listen and Identify | Listen to the sound. Go to the board and identify the letter |
| 28 | Repeat the words along with me | Repeat the words after the teacher. |
| 29 | I can Talk | Frame simple sentences using simple structures/ phrases |
| 30 | Look and Say | Look at the pictures and say few simple sentences |
| 31 | Listen to and put it | Listen to the word. Pick that word card from the tray, read the word, |

| | | |
|---|---|---|
| | | run to the picture and put the word card on the spot of the picture |
| 32 | Listen to, run and Tap | Listen to the word. Run to the board. Tap on the word written on the board. |
| 33 | Simple sentences | Frame simple sentences with the help of the teacher. |
| 34 | Look and Say | Let the children free to talk anything they know about the picture |
| 35 | Count and Say | Look at the picture and fill in the columns |
| 36 | Count and Say | Look at the picture. Fill in the columns |
| 37 | What is that?? | The child must guess the name of the picture that is tied to his back |
| 38 | My story | Construct a simple story with the help of the children |
| 39 | Read ans Match | Help the children to read the sentences and identify the sentences that are not related to the pictures. |
| 40 | Match my action | To ensure learning say an action word to each of the child. He/she has to do the action and pick the correct word from the word cards. |

**Transition Period Tasks – Class 3 and 4**

| Day | Concepts | TLM Required |
|---|---|---|
| Day 1 | Colours, Counting | Pictures, things |
| Day 2 | Counting – Add and Subtract | Real objects |
| Day 3 | Add and Subtract | Real objects |
| Day 4 | Heavy Light | Real objects |
| Day 5 | Heavy and Light | Wrappers, Empty Boxes, Pamphlets, Labels etc. |
| Day 6 | Shapes | Poem Charts |
| Day 7 | Addition, Animals and Birds | Match sticks for colouring |
| Day 8 | Addition, Animals and Birds | Charts / Surrounding |
| Day 9 | Instructions | Classroom Labels |
| Day10 | Flowers and Leaves, Shape, Size, Colour and Texture | Charts / surroundings |
| Day11 | Using Prepositions | Real contexts and objects |
| Day12 | Can – Can't | Real situations and objects |
| Day13 | Can – Can't, Heavy and Light | Photographs of Shops and Names |
| Day14 | Much and Many, Countable and Uncountable Nouns | Newspapers (with pictures) |
| Day15 | Shopping – Money and Prices | Coins, notes – real or paper |
| Day16 | Big, bigger, biggest<br>Geometrical Shapes | Charts and real objects |
| Day17 | Adjectives – Comparatives | Pictures and real situations |
| Day18 | Dialogues | Dialogue cards |
| Day19 | Dialogues | Dialogue cards |
| Day20 | Building Sentences | Charts, word cards |
| Day21 | Vocabulary | Picture Dictionary Preparation |
| Day22 | Stories, Sentences | Story Book Making<br>Sentence Book Making |
| Day23 | Instructions | Handout |
| Day24 | IF | Pictures, charts |
| Day25 | Act – 19 | Pictures, charts |
| Day26 | Act – 20 | Pictures, charts |
| Day27 | Act – 21 | Pictures, charts |
| Day28 | Act – 22 | Pictures, charts |
| Day29 | Any | Anything related |
| Day30 | Any | Anything related |